<table>
<tr><td colspan="4">ಕರ್ನಾಟಕ ಸರ್ಕಾರ<br>(ಸಿ.ಆರ್.ಪಿ-67)</td></tr>
<tr><td rowspan="4">ಹೇಳಿಕೆ ಹಾಳೆ (ಆರ್.ಸಿ. ಸಂಖ್ಯೆ 57) ನಮೂನೆ ಸಂಖ್ಯೆ 4</td><td colspan="3">ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಚನ್ನಪಟ್ಟಣ</td></tr>
<tr><td colspan="3">ಸಿ.ಸಿ ನಂ. 564/2018</td></tr>
<tr><td></td><td>ಸಿ.ಡಬ್ಲೂ</td><td>14</td></tr>
<tr><td></td><td>ಪಿ.ಡಬ್ಲೂ</td><td>6</td></tr>
<tr><td>ಸಾಕ್ಷಿದಾರರ ಹೆಸರು</td><td colspan="3">ರಮೇಶ್. ಕೆ.ಬಿ.ಬಿನ್ ಲೇ. ಬೋರಯ್ಯ</td></tr>
<tr><td>ವಯಸ್ಸು</td><td colspan="3">43 ವರ್ಷ</td></tr>
<tr><td>ಉದ್ಯೋಗ</td><td colspan="3">ಹೆಚ್.ಸಿ, ಗ್ರಾಮಾಂತರ ಪೊಲೀಸ್ ಠಾಣೆ</td></tr>
<tr><td>ವಾಸಸ್ಥಳ</td><td colspan="3">ಚನ್ನಪಟ್ಟಣ</td></tr>
</table>

ದಿನಾಂಕಃ **15.04.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

**1)** ನಾನು **2021** ಜುಲೈ ರಿಂದ ಈಗಲೂ ಸಹ ಚನ್ನಪಟ್ಟಣ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಹೆಚ್.ಸಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

**2)** ದಿ. **11.05.2018** ರಂದು ರಾತ್ರಿ **2.20** ರ ಸಮಯದಲ್ಲಿ ವಂದಾರಗುಪ್ಪೆ ಗ್ರಾಮದಲ್ಲಿ ಅಪಘಾತ ಆಗಿದೆ ಎಂದು ನನಗೆ ದೂರವಾಣಿ ಕರೆ ಬಂದಿತ್ತು. ನಾನು ಸ್ಥಳಕ್ಕೆ ಹೋದೆನು. ಸ್ಥಳದಲ್ಲಿ ಎರಡು ಲಾರಿಗಳ ನಡುವೆ ಅಪಘಾತ ಆಗಿದ್ದಾಗಿ ಕಂಡು ಬಂದಿತ್ತು. ಅಪಘಾತಕ್ಕೆ ಒಳಪಟ್ಟ ವಾಹನಗಳ ನೋಂದಣಿ ಸಂಖ್ಯೇ ಕೆಎಲ್**17** ಬಿ**0607** ಮತ್ತು ಎಂ.ಪಿ.**17** ಸಿ**4562** ಆಗಿತ್ತು. ಕೆಎಲ್**17** ಬಿ**0607** ವಾಹನ ಚಾಲಕ ಸ್ಥಳದಲ್ಲಿ ಮೃತಪಟ್ಟಿದ್ದು ಆತನ ಮೃತದೇಹವನ್ನು ಆಂಬುಲೆನ್ಸ ಮೂಲಕ ಆಸ್ಪತ್ರೆಗೆ ಕಳುಹಿಸಿದ್ದೆನು. ಮೃತಪಟ್ಟ ವ್ಯಕ್ತಿ ಕೇರಳ ರಾಜ್ಯದ ಎರನಾಕುಲಂ ಜಿಲ್ಲೆಯವರು ಎಂದು ತಿಳಿದುಬಂದಿತ್ತು. ಮೃತನ ಸಂಬಂಧಿಕರಿಗೆ ಸ್ಥಳೀಯರ ಸಹಾಯದಿಂದ ಮಾಹಿತಿ ತಿಳಿಸಿದ್ದೆನು. ನಂತರ ಮೃತನ ಸಂಬಂಧಿಕರು ದಿಃ**12.05.2018** ರಂದು ಮದ್ಯಾಹ್ನ **12** ಗಂಟೆ ಸಮಯಕ್ಕೆ ಠಾಣೆಗೆ ಬಂದು ಒಂದು ಲಿಖಿತ ದೂರನ್ನು ಕೊಟ್ಟಿದ್ದು ಅದನ್ನು ಸ್ವೀಕರಿಸಿ ಠಾಣಾ ಗುನ್ನಾ ನಂ. **73/2018** ರಂತೆ ಪ್ರಕರಣ ದಾಖಲಿಸಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

**3)** ದಿ.**12.05.2018** ರಂದು ಸಾರ್ವಜನಿಕ ಆಸ್ಪತ್ರೆಗೆ ಮಧ್ಯಾಹ್ನ **03.30** ಕ್ಕೆ ಭೇಟಿ ಕೊಟ್ಟು ಶವಪಂಚನಾಮೆಯನ್ನು ಮಾಡಿರುತ್ತೇನೆ. ಗುನ್ನಾ ಸ್ಥಳದಲ್ಲಿದ್ದ ವಾಹನಗಳನ್ನು ಪಂಚನಾಮೆಯಡಿ ಜಪ್ತುಪಡಿಸಿರುತ್ತೇನೆ. ಪ್ರಕರಣದ ಕಡತನವನ್ನು ಮುಂದಿನ ತನಿಖೆಗಾಗಿ ಚಾಸಾ-**15** ರವರು ವಹಿಸಿಕೊಂಡಿರುತ್ತಾರೆ.

**4)** ದೂರನ್ನು ಸ್ವೀಕರಿಸಿದ ಬಗ್ಗೆ ಇರುವ ತನ್ನ ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ದೂರನ್ನು ನಿಪಿಃ **5** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **5**(ಎ) ಎಂದು ಗುರ್ತಿಸಲಾಯಿತು.

**5)** ಅಪರಾಧ ಸ್ಥಳದ ಪಂಚನಾಮೆ ನಿಪಿಃ **3** ರಂತೆ ಇದ್ದು ಸಾಕ್ಷಿಯ ಸಹಿಯನ್ನು ನಿಪಿಃ **3** (ಬಿ) ಎಂದು ಗುರ್ತಿಸಲಾಯಿತು.

**6)** ಶವ ಪಂಚನಾಮೆಯನ್ನು ನಿಪಿಃ**6** ಎಂದು ಸಾಕ್ಷಿಯ ಸಹಿಯನ್ನು ನಿಪಿಃ **6**(ಎ) ಎಂದು ಗುರ್ತಿಸಲಾಯಿತು.

**7)** ಪ್ರ.ವ.ವಯನ್ನು ನಿಪಿಃ **7** ಎಂದು ಸಾಕ್ಷಿಯ ಸಹಿಯನ್ನು ನಿಪಿಃ **7**(ಎ) ಎಂದು ಗುರ್ತಿಸಲಾಯಿತು.

**ಮರುವಿಚಾರಣೆ ಇಲ್ಲ.**

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್.ಎಸ್.ಎ. ವಕೀಲರಿಂದ</u>**

**1)** ನಾನು ಹೇಳಿದಂತೆ ಅಪಘಾತ ಆಗಿಲ್ಲ, ಆ ಬಗ್ಗೆ ನನಗೆ ಯಾವುದೇ ಮಾಹಿತಿ ಬಂದಿಲ್ಲ ಮತ್ತು ನಾನು ಗುನ್ನಾ ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಮೃತನ ಕುಟುಂಬಕ್ಕೆ ಅನುಕೂಲ ಆಗಲೀ ಎಂಬ ಕಾರಣಕ್ಕೆ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಠಾಣಾ ಅಂಕೆ ಸಂಖ್ಯೆಗೋಸ್ಕರ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನ ವಿರುದ್ದ ಸುಳ್ಳು ದೂರು ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿತನ ಯಾವುದೇ ತಪ್ಪು ಇರದಿದ್ದರೂ ಸಹ ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು)

ಓ.ಹೆ.ಕೆ.ಸರಿ ಇದೆ.

ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ.ದಂ.ಗಳು
ಚನ್ನಪಟ್ಟಣ